ವಾಸಕ್ಕಾಗಿ ಉಪಯೋಗಿಸುವ ಸ್ಥಳವನ್ನು, ಮೊದಲು ಸಾರ್ವಜನಿಕ ನೋಟೀಸ್ ಕೊಟ್ಟು, ನಂತರವೂ ಯಾರೂ ಉತ್ತರಿಸದೇ ಹೋದರೆ, ಆ ಜಾಗವನ್ನು ಸ್ಲಂ ಎಂದು ಸರ್ಕಾರ ಘೋಷಿಸುತ್ತದೆ. ಸರ್ಕಾರದಿಂದ ಈ ರೀತಿಯಲ್ಲಿ ಸ್ಲಂ ಎಂದು ಘೋಷಿಸಲಾಗುವ ಜಾಗವನ್ನು (ಡಿಕ್ಲೇರ್ಡ್ ಸ್ಲಂ) ಸುಸ್ಥಿತಿಯಲ್ಲಿಟ್ಟು, ಮೂಲಸೌಕರ್ಯಗಳನ್ನು ಒದಗಿಸಿ, ನಿರ್ವಹಿಸುವ ಜವಾಬ್ದಾರಿ ರಾಜ್ಯ ಸರ್ಕಾರದ್ದು. ಹೀಗೆ ಘೋಷಿಸುವ ಮೂಲಕ ಅಲ್ಲಿರುವ ಜನರು ಸುಮಾರು ವರ್ಷಗಳಿಂದ ಅಲ್ಲಿ ವಾಸಿಸುತ್ತಿದ್ದಾರೆ, ಅವರ ಇರುವಿಕೆಯನ್ನು ಈವರೆಗೂ ಯಾರೂ ಪ್ರಶ್ನಿಸಿಲ್ಲ ಎಂಬುದನ್ನು ಸರ್ಕಾರವೇ ಹೇಳುತ್ತದೆ. ಕಾನೂನಿನ ಅನ್ವಯ ಘೋಷಿತ ಸ್ಲಂಗಳ ನಿವಾಸಿಗಳಿಗೆ ವಾಸದ ಹಕ್ಕಿದೆ.

ಕರ್ನಾಟಕದ ಸ್ಲಂಗಳಲ್ಲಿ ವಾಸಿಸುವ ಜನರ ಬಹುತೇಕ ಹಕ್ಕುಗಳನ್ನು ನಿರ್ಣಯಿಸುವ ಕಾಯಿದೆ, 'ಕರ್ನಾಟಕ ಸ್ಲಂ ಜಾಗಗಳ (ಅಭಿವೃದ್ಧಿ) ಕಾಯಿದೆ, 1973'. ಈ ಕಾಯಿದೆ, ಯಾವಾಗ, ಯಾವ ಸ್ಥಳಗಳನ್ನು ಸ್ಲಂ ಎಂದು ಘೋಷಿಸಬೇಕು, ಘೋಷಿಸುವ ಪ್ರಕ್ರಿಯೆ ಹೇಗೆ ನಡೆಯಬೇಕು, ಹೇಗೆ ರಾಜ್ಯ ಸರ್ಕಾರಗಳು ಸ್ಲಂ ಜಾಗಗಳ ಅಭಿವೃದ್ಧಿಗಾಗಿ ಆಸ್ತಿಗಳ ಸ್ವಾಧೀನ ತೆಗೆದುಕೊಳ್ಳಬಹುದು, ಈ ಕಾರ್ಯಗಳನ್ನು ಮಾಡಲು ಪ್ರತಿ ಜಿಲ್ಲೆಯಲ್ಲಿ ಸ್ಲಂ ಬೋರ್ಡ್‌ಗಳನ್ನು ಯಾವ ರೀತಿಯಲ್ಲಿ ರೂಪಿಸಬೇಕು ಮುಂತಾಗಿ ಹೇಳಿದೆ.

ಭಾರತದ ಸಂವಿಧಾನದ ಪ್ರಕಾರ ಆಸ್ತಿಯ ಮೇಲಿನ ಹಕ್ಕು ಮೂಲಭೂತ ಹಕ್ಕಲ್ಲ. ಆದರೆ ಯಾರನ್ನೂ ಅವರಿರುವ ಜಾಗದಿಂದ ಅಕ್ರಮವಾಗಿ ಹೊರಹಾಕುವಂತಿಲ್ಲ. ಅಂದರೆ, ಅವರು ಇರುವ ಜಾಗದ ಮೇಲೆ ಅವರಿಗೆ ಒಡೆತನವೂ ಇಲ್ಲ, ಬೇರೆ ಯಾವ ಹಕ್ಕೂ ಇಲ್ಲ ಅಂತ ಕೋರ್ಟಿನಲ್ಲಿ ಸಾಬೀತಾದರೆ ಮಾತ್ರ ಅವರನ್ನು ಹೊರಹಾಕುವಂತೆ ಕ್ರಮ ತೆಗೆದುಕೊಳ್ಳಬಹುದು.

## ಎರಡನೇ ದರ್ಜೆಯವರೇ?

ಕಾನೂನು ಹಾಗೂ ಅದರ ವ್ಯವಸ್ಥೆಯ ಮನೋಧರ್ಮ, ಸಮಾಜದ ಮನಃಸ್ಥಿತಿ ಹೇಗಿದೆಯೆಂದರೆ, ಸ್ಲಂನಲ್ಲಿರುವ ಜನರ ಹಕ್ಕುಗಳೇ ಎರಡನೇ ದರ್ಜೆಯವೇನೋ ಎನ್ನುವಂತೆ. ಏಕೆಂದರೆ, ಸ್ಲಂಗೆ ನಾವು ಬಳಸುವ ಪದ 'ಕೊಳಚೆಪ್ರದೇಶ'. 195859ರಲ್ಲಿ ಮೊದಲ ಬಾರಿಗೆ ಭಾರತದಲ್ಲಿ ಕೊಳಚೆಪ್ರದೇಶಗಳ ಬಗೆಗಿನ ಕಾನೂನಾದಾಗ, ಆ ಕಾಯಿದೆಯ ಮುಖ್ಯ ಉದ್ದೇಶ, ಕೊಳಚೆಪ್ರದೇಶಗಳ ನಿರ್ಮೂಲನೆ ಆಗಿತ್ತು; ಹೆಸರೂ ಹಾಗೆಯೇ ಇತ್ತು – 'ಕೊಳಚೆಪ್ರದೇಶಗಳ ನಿರ್ಮೂಲನಾ ಕಾಯಿದೆ. ಆ ಕಾಯಿದೆಯ ಹೆಸರನ್ನು 1974ರಲ್ಲಿ ಕರ್ನಾಟಕದಲ್ಲಿ ಬದಲಿಸಿ, 'ಕೊಳಚೆಪ್ರದೇಶಗಳ ಅಭಿವೃದ್ಧಿ ಕಾಯಿದೆ ಎಂಬ ತಿದ್ದುಪಡಿ ತಂದರು.

ಆದರೂ ನಮ್ಮ ಪ್ರವೃತ್ತಿಗಳಲ್ಲಿ ಇನ್ನೂ ಕೊಳಚೆಪ್ರದೇಶಗಳ ನಿರ್ಮೂಲನವೇ ಎದ್ದು ಕಾಣುತ್ತದೆ. ಕೊಳಚೆಪ್ರದೇಶಗಳ ನಿರ್ಮೂಲನವೆಂದರೆ, ಅಲ್ಲಿನ ನಿವಾಸಿಗಳ ನಿರ್ಮೂಲನವೇ ಆಗಿರುತ್ತದೆ. ಈ ರೀತಿ ಮಾಡುವಾಗ ಅವರ ಜೀವನೋಪಾಯದಂತಹ ಮೂಲಭೂತ ಮಾನವಹಕ್ಕನ್ನೂ ಲೆಕ್ಕಿಸದೆ, ಸುತ್ತಮುತ್ತಲಿನ 'ಪ್ರಜಾಜನರ ಹಿತದೃಷ್ಟಿಯಿಂದ, ನಗರದ 'ಸೌಂದರ್ಯದ ದೃಷ್ಟಿಯಿಂದ ಅವರನ್ನು ಅವರ ಮನೆಗಳಿಂದ ಹೊರಹಾಕಿ, ಅವರ ಜೋಪಡಿಗಳನ್ನು ಒಡೆದು ತೆಗೆಯಲಾಗುತ್ತದೆ. ಹೀಗೆ ಮಾಡುವಾಗ, ಅವರು ತಮ್ಮ ಮನೆ, ಊರುಗಳನ್ನು ಬಿಟ್ಟುಬರುವಲ್ಲಿಯೂ ಸರ್ಕಾರದ ನೀತಿಗಳೇ, ನಮ್ಮ 'ಅಭಿವೃದ್ಧಿಯ ಯೋಜನೆಗಳೇ ಕಾರಣವಾಗಿರುತ್ತವೆ ಎಂಬುದನ್ನು ನಾವು ಒಪ್ಪಿಕೊಳ್ಳುವುದಿಲ್ಲ.

ಸ್ಲಂ ನಿವಾಸಿಗಳನ್ನು ಅವರ ಮನೆಗಳಿಂದ ಹೊರಹಾಕುವಾಗ ಅವರಿಗೆ ಪುನರ್ವಸತಿ ಕಲ್ಪಿಸಬೇಕೆಂದು ಕಾನೂನು ಹೇಳುತ್ತದೆ. ಹಾಗೆ ಮಾಡುವಾಗ ಆ ಪುನರ್ವಸತಿಗಳನ್ನು ಪಟ್ಟಣದಿಂದ ಹೊರಗೆಲ್ಲೋ ಇಟ್ಟುಬಿಡುತ್ತಾರೆ. ಮೂಲಭೂತ ಸೌಕರ್ಯವೂ ಆ ಮನೆಗಳಲ್ಲಿ ಇರುವುದಿಲ್ಲ. ಬೆಂಗಳೂರಿನಲ್ಲಿಯೇ ಸುಮಾರು 2000 ಸ್ಲಂಗಳಿವೆ. ಅವುಗಳಲ್ಲಿ ಸರ್ಕಾರ ಗುರುತಿಸಿರುವುದು 597ನ್ನು ಮಾತ್ರ. ಅಂದರೆ, ಬಡಜನರ ಅಗತ್ಯಗಳನ್ನು ಕಂಡುಕೊಂಡು, ಅವರ ಮೂಲಭೂತ ಹಕ್ಕುಗಳ ಪಾಲನೆಯಾಗುವೆಡೆಗೆ ಕನಿಷ್ಠ ಕೆಲಸವನ್ನೂ ಸರ್ಕಾರಗಳು ಮಾಡುವುದಿಲ್ಲ.

'ಸ್ಲಂ ನಿವಾಸಿಗಳನ್ನು ಎರಡನೇ ದರ್ಜೆಯ ಪ್ರಜೆಗಳಂತೆ ಕಾಣಲಾಗದು; ಬಡವರ ಹಿತದೃಷ್ಟಿ, ಶ್ರೀಮಂತರ ಹಿತದೃಷ್ಟಿಯಿಂದ ಯಾವುದೇ ರೀತಿಯಲ್ಲಿ ಕಡಿಮೆಯದ್ದಲ್ಲ' ಎಂದು, 2019ರಲ್ಲಿ ದೆಹಲಿ ಉಚ್ಚ ನ್ಯಾಯಾಲಯ ಹೇಳಿತು. ಇಂತಹ ಇನ್ನಷ್ಟು ಮಾತು, ಕೆಲಸ ಆಗಬೇಕಾಗಿದೆ. ಸ್ಲಂ ನಿವಾಸಿಗಳ ವಸತಿಯ ಹಕ್ಕುಗಳನ್ನು ಕಾಪಾಡಬಲ್ಲ ಸಮಗ್ರ ಕಾಯಿದೆಯ ಅಗತ್ಯವೂ ಬಹಳವಿದೆ.

(ಲೇಖಕರು ನ್ಯಾಯವಾದಿ)


